# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 14/2018**

**ದೋ.ಸಾ. : 06 ಫ್ರಾ.ಸಾ. : 02**

ಸಾಕ್ಷಿಯ ಹೆಸರು : ದೇವಿ ಮಾಸ್ತಿ ಮುಕ್ರಿ
ಗಂಡನ ಹೆಸರು : ಮಾಸ್ತಿ ಮುಕ್ರಿ
ವಯಸ್ಸು : 52 ವರ್ಷ
ಕೆಲಸ : ಗೃಹಿಣಿ
ವಾಸ : ತೊಪ್ಪಲಕೇರಿ, ತಾಃ ಹೊನ್ನಾವರ

**ದಿನಾಂಕಃ 30-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. ಸಾಕ್ಷಿಯ ವಿಚಾರಣೆಯನ್ನು ಇನ್ ಕ್ಯಾಮೆರಾದ ಮೂಲಕ ಪಡೆಯಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಚಾಸಾ-1 ನನ್ನ ತಾಯಿಯ ತಂಗಿಯ ಮಗಳು ಅಂದರೆ ನನಗೆ ಸಂಬಂಧದಲ್ಲಿ ತಂಗಿಯಾಬೇಕು. ಆಕೆ ಚಿಕ್ಕವಯಸ್ಸಿನಲ್ಲಿರುವಾಗಲೇ ಆಕೆಯ ತಂದೆ-ತಾಯಿ ತೀರಿಕೊಂಡ ಕಾರಣ ಅವಳು ನನ್ನ ಮನೆಯಲ್ಲಿ ಬೆಳೆದಿರುತ್ತಾಳೆ ಹಾಗೂ ಆಕೆ ನನ್ನನ್ನು ಚಿಕ್ಕಮ್ಮ ಎಂದು ಕರೆಯುತ್ತಾಳೆ. ನಾನು ತೊಪ್ಪಲಕೇರಿಯಲ್ಲಿ ವಾಸವಾಗಿದ್ದು, ನನ್ನ ಮನೆಯಲ್ಲಿ ನನ್ನ ಗಂಡ, ನನ್ನ ತಾಯಿ ಹಾಗೂ ನನ್ನ 2 ಜನ ಮಕ್ಕಳು ಮತ್ತು ಚಾಸಾ-1 ಇದ್ದೆವು. ನಾನು ಹೊನ್ನಾವರದಲ್ಲಿ ಬೀದಿ ವ್ಯಾಪಾರ ಮಾಡುತ್ತಿದ್ದು, ಬೆಳಿಗ್ಗೆ ಹೋದರೆ, ಸಂಜೆ ಮನೆಗೆ ಬರುತ್ತೇನೆ. ಚಾಸಾ-1 ರವರು 10 ನೇ ತರಗತಿ ವರೆಗೆ ಹೊನ್ನಾವರದ ಸರಕಾರಿ ಪ್ರೌಢ ಶಾಲೆಯಲ್ಲಿ ಕಲಿತಿರುತ್ತಾಳೆ. 2016 ರಲ್ಲಿ ನಾನು ದ್ವಿತಿಯ ಪಿ.ಯು.ಸಿ ಯ ಬಾಹ್ಯ ಶಿಕ್ಷಣಕ್ಕೆ ದಾಖಲಾಗಿದ್ದು, ಹೊನ್ನಾವರದ ಮಾನಸ ಕೋಚಿಂಗ್ ಸೆಂಟರ್ ಗೆ ಪಾಠಕ್ಕಾಗಿ ಹೋಗುತ್ತಿರುತ್ತಾಳೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು ಹಾಗೂ ಆತ ಗೂಡ್ಸ್ ರಿಕ್ಷಾ ಇಟ್ಟುಕೊಂಡಿರುತ್ತಾನೆ ಹಾಗೂ ಚಾಸಾ-1 ರವರ ಜೊತೆ ಮಾತನಾಡುತ್ತಿರುತ್ತಾನೆ ಹಾಗೂ ನಮ್ಮ ಮನೆಗೂ ಸಹ ಬಂದು ಹೋಗುತ್ತಿರುತ್ತಾನೆ.

2. ಆರೋಪಿಯು ಚಾಸಾ-1 ರವರ ಜೊತೆ ಮಾತನಾಡುತ್ತಿದ್ದರಿಂದ, ನಾವು ಚಾಸಾ-1 ರವರ ಬಳಿ ವಿಚಾರಿಸಿದಾಗ, ಆಕೆಯು ಆರೋಪಿಯು ನನಗೆ ಪರಿಚಯದವನು ಇರುತ್ತಾನೆ ಎಂದು ಹೇಳಿರುತ್ತಾಳೆ. 2016 ನೇ ಇಸ್ವಿಯಲ್ಲಿ ನನ್ನ ಬಳಿ 2 ಬಂಗಾರದ ಮಂಗಳ ಸೂತ್ರಗಳು ಇದ್ದು, ಸಣ್ಣ ಮಂಗಳ ಸೂತ್ರವನ್ನು ನಾನು ಧರಿಸುತ್ತಿದ್ದೆ ಹಾಗೂ ಮೂರುವರೆ ತೊಲ ಮಂಗಳ ಸೂತ್ರವನ್ನು ಯಾವಾಗಲೂ ಮನೆಯಲ್ಲಿಟ್ಟಿರುತ್ತಿದ್ದೆ. ಸದರಿ ಮಂಗಳ ಸೂತ್ರವನ್ನು ಯಾವುದಾದರೂ ಕಾರ್ಯಕ್ರಮಗಳು ಇದ್ದರೆ ಹಾಕಿಕೊಳ್ಳುತ್ತಿದ್ದೆ.

3. 2016 ಡಿಸೆಂಬರ್ ತಿಂಗಳಲ್ಲಿ ಚಾಸಾ-1 ರವರು ಬೇಜಾನಲ್ಲಿದ್ದು, ನಾನು ಆಕೆಯನ್ನು ಏನಾಯಿತು ಎಂದು ವಿಚಾರಿಸಿದಾಗ, ಚಾಸಾ-1 ರವರು "ದಿಃ 13-11-2016 ರಂದು ನಾನು ಮನೆಯಲ್ಲಿ ಒಬ್ಬಳೇ ಇದ್ದಾಗ, 12-00 ಗಂಟೆ ಸುಮಾರಿಗೆ, ಆರೋಪಿ ನಮ್ಮ ಮನೆಗೆ ಬಂದು, ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ, ನಿನ್ನನ್ನು ಮದುವೆಯಾಗುತ್ತೇನೆ ಅಂತಾ ಹೇಳಿ, ನಂಬಿಸಿ, ನನಗೆ ಹಣದ ಅವಶ್ಯಕತೆ ಇದೆ, ಸ್ವಲ್ಪ ಹಣ ಕೊಡು ಎಂದು ಕೇಳಿದ, ಆಗ ನಾನು ಹಣ ಇಲ್ಲ ಎಂದು ಹೇಳಿರುತ್ತೇನೆ, ಆಗ ಆರೋಪಿಯು ನಿನ್ನ ಚಿಕ್ಕಮ್ಮನ ಬಳಿ ಹಣವನ್ನು ತೆಗೆದುಕೊಂಡು ಕೊಡು ಎಂದು ಹೇಳಿದ, ಆಗ ನಾನು ಆಗುವುದಿಲ್ಲ ಎಂದು ಹೇಳಿದಾಗ, ಆರೋಪಿಯು ನಿನ್ನ ಚಿಕ್ಕಮ್ಮನ ಬಂಗಾರವನ್ನು ಕೊಡು ಎಂದು ಹೇಳಿ, ನನ್ನ ಮೈ-ಕೈಯನ್ನು ಮುಟ್ಟಿ, ಬಟ್ಟೆಗಳನ್ನು ಹಿಡಿದು ಎಳೆದಾಡಿ, ಬಲತ್ಕಾರ ಮಾಡುತ್ತೇನೆ ಎಂದು ಹೆದರಿಸಿದನು, ಆಗ ನಾನು ನಿನ್ನ ಬಂಗಾರದ ಮಂಗಳ ಸೂತ್ರವನ್ನು ಕೊಟ್ಟು, "ನೀನು ಇದನ್ನು ಅಡವಿಟ್ಟು, ಒಂದು ವಾರದ ಒಳಗೆಡೆ ಬಿಡಿಸಿ ಕೊಡು" ಎಂದು ಹೇಳಿದೆ ಹಾಗೂ ಆರೋಪಿಯು ಈ ವಿಷಯವನ್ನು ನಿನ್ನ ಚಿಕ್ಕಮ್ಮಗೆ ತಿಳಿಸಬೇಡ ಎಂದು ಹೇಳಿದ, ಆ ನಂತರ ಒಂದು ವಾರವಾದರೂ ಸಹ ಆರೋಪಿ ಬಂಗಾರದ ಮಂಗಳಸೂತ್ರವನ್ನು ಹಿಂದಿರುಗಿಸಿರುವುದಿಲ್ಲ, ಅದಕ್ಕೆ ನಾನು ಆತನಿಗೆ ಕರೆ ಮಾಡಿದರೆ, ಆತ ಕರೆಗಳನ್ನು ಸ್ವೀಕರಿಸುತ್ತಿಲ್ಲ, ಆದ್ದರಿಂದ ನಾನು ಬೇಜಾರಿನಲ್ಲಿದ್ದೆ" ಎಂದು ಹೇಳಿರುತ್ತಾಳೆ. ವಿಷಯವನ್ನು ಕೇಳಿ ತಿಳಿದ ನಾವು ಅದೇ ದಿನ ಆಕೆಯನ್ನು ಹೊನ್ನಾವರ ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ, ಆರೋಪಿಯ ವಿರುದ್ಧ ದೂರು ನೀಡಿರುತ್ತೇವೆ. ದೂರು ಕೊಟ್ಟ ನಂತರ ಪೊಲೀಸರು ನಮ್ಮ ಮನೆಯ ಹತ್ತಿರ ಬಂದು ಪಂಚನಾಮೆ ಮಾಡಿ, ನಕಾಶೆ ತಯಾರಿಸಿ, ಪೋಟೋ ತೆಗೆದಿರುತ್ತಾರೆ ಹಾಗೂ ಪಂಚನಾಮೆಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ನಿಪಿ-2 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು,

ಅದನು ನಿಪಿ–2(ಬಿ) ಎಂದು ಗುರುತಿಸಲಾಯಿತು. ನಿಪಿ–4 ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

4. ಆರೋಪಿಯ ವಿರುದ್ಧ ದೂರು ನೀಡಿದ ನಂತರವೂ ಸಹ ಅಂದರೆ ದಿಃ 12–01–2017 ರಂದು ಚಾಸಾ–1 ರವರು ಬೇಜಾರಿನಲ್ಲಿರುವುದನ್ನು ನೋಡಿ, ನಾನು ಚಾಸಾ–1 ರವರ ಬಳಿ ವಿಚಾರಿಸಿದಾಗ, ಆಕೆ ನನ್ನ ಬಳಿ "ನಾನು ದೂರು ನೀಡುವಾಗ ಕೆಲವೊಂದು ವಿಷಯಗಳನ್ನು ನಿಮ್ಮ ಬಳಿ ಹೇಳಿರುವುದಿಲ್ಲ, ಏಕೆಂದರೆ ನೀವು ನನಗೆ ಬೈಯುತ್ತೀರಾ? ಹಾಗೂ ಅದು ನನ್ನ ಮರ್ಯಾದೆ ಪ್ರಶ್ನೆಯಾದ ಕಾರಣ, ನಾನು ಹೇಳಿರುವುದಿಲ್ಲ" ಎಂದು ಹೇಳಿರುತ್ತಾಳೆ. ಆಗ ನಾನು ಸಮಾಧಾನದಿಂದ ಚಾಸಾ–1 ರವರ ಬಳಿ ವಿಷಯ ಏನೆಂದು ಕೇಳಿದಾಗ, ಆಕೆ "ನಾನು ಆರೋಪಿಗೆ ಬಂಗಾರವನ್ನು ಕೊಡುವ ಮೊದಲೇ ಅಂದರೆ 2016 ನೇ ಇಸ್ವಿಯಲ್ಲಿ ಆರೋಪಿಯು ನನಗೆ ನಿನ್ನನ್ನು ಪ್ರೀತಿಸುತ್ತೇನೆ, ಮದುವೆಯಾಗುತ್ತೇನೆ ಎಂದು ನಂಬಿಸಿ, ಹೊನ್ನಾವರದ ಬಾಸ್ಕೇರಿ ಸರಕಾರಿ ಶಾಲೆಯ ಹಿಂದುಗಡೆ ಇರುವ ಅರಣ್ಯ ಪ್ರದೇಶಕ್ಕೆ ನನ್ನನ್ನು ಕರೆದುಕೊಂಡು ಹೋಗಿ, ನನ್ನ ಇಚ್ಛೆಗೆ ವಿರುದ್ಧವಾಗಿ 2–3 ಬಾರಿ ದೈಹಿಕ ಸಂಭೋಗ ಮಾಡಿರುತ್ತಾನೆ" ಎಂದು ಹೇಳಿರುತ್ತಾಳೆ. ಈ ವಿಷಯವನ್ನು ಕೇಳಿದ ನಾನು ಚಾಸಾ–1 ರವರಿಗೆ ನಾನು ಈ ವಿಷಯವನ್ನು ದೂರು ನೀಡುವಾಗಲೇ ಯಾಕೇ ಹೇಳಲಿಲ್ಲ ಎಂದು ಕೇಳಿರುತ್ತೇನೆ ಹಾಗೂ ಆಕೆಯನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿರುತ್ತೇನೆ. ಅಲ್ಲಿ ಆಕೆಯು ಹೇಳಿಕೆಯನ್ನು ನೀಡಿರುತ್ತಾಳೆ. ಆ ನಂತರ ಪೊಲೀಸರು ಚಾಸಾ–1 ರವರನ್ನು ವೈದ್ಯಕೀಯ ಪರೀಕ್ಷೆಗಾಗಿ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ವೈದ್ಯರು ಚಾಸಾ–1 ರವರ ಹಾಗೂ ನನ್ನ ಸಹಿಯನ್ನು ಪಡೆದುಕೊಂಡು, ಆಕೆಗೆ ವೈದ್ಯಕೀಯ ಪರೀಕ್ಷೆ ಮಾಡಿರುತ್ತಾರೆ. ನಿಪಿ–5 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–5(ಬಿ) ಎಂದು ಗುರುತಿಸಲಾಯಿತು. ವೈದ್ಯಕೀಯ ಪರೀಕ್ಷೆಯ ನಂತರ ಪೊಲೀಸರು ಚಾಸಾ–1 ರವರನ್ನು ಬಾಸ್ಕೇರಿ ಸರಕಾರಿ ಶಾಲೆಯ ಹಿಂದುಗಡೆ ಇರುವ ಅರಣ್ಯ ಪ್ರದೇಶದ ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು, ಆ ಸಮಯದಲ್ಲಿ ನಾನೂ ಸಹ ಹಾಜರು ಇರುತ್ತೇನೆ. ಸದರಿ ಘಟನಾ ಸ್ಥಳದ ಸಮಯದಲ್ಲಿ ತೆಗೆದ ನಿಪಿ–8 ಫೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಈ ಘಟನೆಯ ಕುರಿತು ನಾನು ಪೊಲೀಸರ ಮುಂದೆ ಹೇಳಿಕೆ ಹಾಗೂ ಮರು ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದೆ ಇರುವ

ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಆರೋಪಿಯು ಚಾಸಾ-1 ರವರನ್ನು ಪ್ರೀತಿಸುತ್ತೇನೆ, ಮದುವೆಯಾಗುತ್ತೇನೆ ಎಂದು ಹೇಳಿ ನಂಬಿಸಿ, ಆಕೆಯೊಂದಿಗೆ ಬಲವಂತವಾಗಿ ಲೈಂಗಿಕ ಸಂಭೋಗ ಮಾಡಿ, ಮೋಸ ಮಾಡಿರುತ್ತಾನೆ ಹಾಗೂ ನನ್ನ ಬಂಗಾರದ ಮಂಗಳ ಸೂತ್ರವನ್ನು ತೆಗೆದುಕೊಂಡು ಹಿಂದಿರುಗಿಸದೆ ಮೋಸ ಮಾಡಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎಸ್.ಬಿ ವಕೀಲರಿಂದ**

ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ರೂ.500/- ಖರ್ಚು ನೀಡುವ ಷರತ್ತಿನೊಂದಿಗೆ ಪಾಟೀ ಸವಾಲಿಗೆ ಸಮಯಾವಕಾಶವನ್ನು ನೀಡಲಾಯಿತು.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ